# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ ರೂ.20.00 ಲಕ್ಷ ಗಳವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ನೀಡುವ ಯೋಜನೆಯ ಅನುಷ್ಠಾನ್ಕಕೆ ಮಾರ್ಗಸೂಚಿ ಹೊರಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: AGRI/155/AML/2023, ದಿನಾಂಕ:29-08-2023.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ:WDD/JDH/BT-RPOs/GL/05/2023-24, ದಿನಾಂಕ:30-09-2023.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-42 ರನ್ವಯ ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 ರೈತರ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ 20 ಲಕ್ಷ ರೂ. ಗಳವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನವನ್ನು ನೀಡುವ ಹೊಸ ಕಾರ್ಯಕ್ರಮವನ್ನು "ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ' ಯೋಜನೆ, ಲೆಕ್ಕ ಶೀರ್ಷಿಕೆ:2401 00-195-0-01ರ ಉಪ ಶೀರ್ಷಿಕೆ:103ರಡಿ ಒದಗಿಸಲಾದ ರೂ.50 ಲಕ್ಷಗಳ (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಅನುದಾನದ ಮಿತಿಯೊಳಗೆ ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ ರವರು ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಸಲ್ಲಿಸಿದ್ದು, ಸೂಕ್ತ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: AGRI/155/AML/2023**
**ಬೆಂಗಳೂರು, ದಿನಾಂಕ: 18-11-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕರ ಸಂಸ್ಥೆಗಳಿಗೆ

ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ ರೂ.20.00 ಲಕ್ಷಗಳ ವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ನೀಡುವ ಯೋಜನೆಯನ್ನು, ಈ ಆದೇಶಕ್ಕೆ ಲಗತ್ತಿಸಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

18/11/2023
**(ಪಿ. ಸತ್ಯಭಾಮ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಇವರಿಗೆ-

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ) / (ಎ ಮತ್ತು ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಯೋ. ಕಾ.ಸಂ & ಸಾಂ.ಇ) , ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ
3. ಸರ್ಕಾರದ ಕಾರ್ಯದರ್ಶಿ(ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ.
4. ಆಯುಕ್ತರು/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ಕೃಷಿ ಆಯುಕ್ತರು/ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
7. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು
9. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

<u>ಪ್ರತಿಯನ್ನು</u>:

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.

*******

**ಸರ್ಕಾರದ ಆದೇಶ ಸಂಖ್ಯೆ: Agri/155/AML/2023,**

**ದಿನಾಂಕ: 18.11.2023 ಕ್ಕೆ ಅನುಬಂಧ:**

**ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ಗರಿಷ್ಠ ತಲಾ.20 ಲಕ್ಷ ರೂ.ವರೆಗಿನ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ನೀಡುವ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿ**

## I. ಪ್ರಸ್ತಾವನೆ:

ರಾಜ್ಯದ ರೈತರು ಅದರಲ್ಲಿ ಪ್ರಮುಖವಾಗಿ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವಲ್ಲಿ ಒಬ್ಬಂಟಿಯಾಗಿ ಎದುರಿಸುವ ಹಲವಾರು ಸವಾಲುಗಳನ್ನು ಪರಿಹರಿಸಲು, ಸ್ಥಳೀಯ ರೈತ ಸಮುದಾಯದ ಸಂಧಾನ ಸಾಮರ್ಥ್ಯವನ್ನು ಹಾಗೂ ವ್ಯವಹಾರಿಕ ಪಾಲುದಾರಿಕೆಯನ್ನು ಅಭಿವೃದ್ಧಿಗೊಳಿಸುವ ಮೂಲಕ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲಾಗಿರುತ್ತದೆ. ಈ ಸಂಸ್ಥೆಗಳನ್ನು ಉತ್ಪಾದಕರ ಬೇಡಿಕೆಗೆ ಅನುಗುಣವಾಗಿ ಹಾಗೂ ಮೌಲ್ಯ ಸರಪಳಿಯ ಪದ್ಧತಿಯನ್ನು ಅಳವಡಿಸುವ ಮೂಲಕ ರೈತರ ಉತ್ಪನ್ನಗಳನ್ನು ಕ್ರೋಢೀಕರಿಸಿ, ಮೌಲ್ಯವರ್ಧಿಸಿ, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸಂಸ್ಕರಿಸಿದ ಉತ್ಪನ್ನಗಳನ್ನು ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಒದಗಿಸುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಆದಾಯ ವೃದ್ಧಿಸಲು ಸಹಕಾರಿಯಾಗಲು ರೂಪಿಸಲಾಗಿದೆ. ರಾಜ್ಯದಲ್ಲಿ ವಿವಿಧ ಇಲಾಖೆ/ಸಂಸ್ಥೆಗಳಿಂದ ಇಲ್ಲಿಯವರೆಗೆ ವಿವಿಧ ಯೋಜನೆಗಳಡಿ ಒಟ್ಟು 1299 ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಉತ್ತೇಜಿಸಲಾಗುತ್ತಿದೆ. ವಿವಿಧ ಇಲಾಖೆಗಳಿಂದ ರಚಿಸಲ್ಪಟ್ಟು, ಹಿಂದುಳಿದ ತಾಲ್ಲೂಕಿನಲ್ಲಿ ಉತ್ತಮವಾಗಿ

ಕಾರ್ಯನಿರ್ವಹಿಸುತ್ತಿರುವ 100 ರೈತ ಉತ್ಪಾದಕರ ಸಂಸ್ಥೆ (FPO)ಗಳನ್ನು ಬಲಪಡಿಸುವ ಉದ್ದೇಶದಿಂದ, ವ್ಯಾಪಾರ ಅಭಿವೃದ್ಧಿಗಾಗಿ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ತಲಾ ಗರಿಷ್ಠ 20 ಲಕ್ಷ ರೂ. ವರೆಗೆ ಪಡೆದ ಸಾಲಕ್ಕೆ ಶೇ.4 ರ ಬಡ್ಡಿ ಸಹಾಯಧನ ಒದಗಿಸಲಾಗುವುದು.

## II. <u>ಯೋಜನೆಯ ಉದ್ದೇಶ:</u>

1. ಹಿಂದುಳಿದ ತಾಲ್ಲೂಕಿಗಳಲ್ಲಿ ರಚನೆಗೊಂಡಿರುವ 100 ರೈತ ಉತ್ಪಾದಕರ ಸಂಸ್ಥೆಗಳು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಪಡೆದ ತಲಾ 20ಲಕ್ಷ ರೂ. ವರೆಗಿನ ಸಾಲಕ್ಕೆ ಶೇ.4ರಷ್ಟು ಬಡ್ಡಿ ಸಹಾಯಧನವನ್ನು ಸರ್ಕಾರದಿಂದ ನೀಡುವುದರಿಂದ, ಸದರಿ ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರಿಕ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಹಿಂದುಳಿದ ತಾಲ್ಲೂಕುಗಳ ರೈತ ಉತ್ಪಾದಕರ ಸಂಸ್ಥೆಗಳ ಸಮಗ್ರ ಸುಧಾರಣೆ ಕೈಗೊಳ್ಳಲು.
2. ರೈತ ಉತ್ಪಾದಕರ ಸಂಸ್ಥೆಗಳ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆಕಿಸುವ ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸಲು ಸಹಕಾರಿಯಾಗಲು.
3. ರೈತ ಉತ್ಪಾದಕರ ಸಂಸ್ಥೆಗಳು ಕೊಯ್ಲೋತ್ತರ ನಿರ್ವಹಣೆ, ಸಂಗ್ರಹಣೆ, ಸಂಸ್ಕರಣೆ/ಮೌಲ್ಯವರ್ಧನೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದ ವಿವಿಧ ತಂತ್ರಜ್ಞಾನಗಳ ಪ್ರೋತ್ಸಾಹ ಮತ್ತು ಅಳವಡಿಕೆಯಿಂದ, ಕೊಯ್ಲೋತ್ತರ ನಷ್ಟಗಳನ್ನು ಕಡಿಮೆಗೊಳಿಸುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಆದಾಯವನ್ನು ವೃದ್ಧಿಗೊಳಿಸಲು ಸಹಕಾರಿಯಾಗಲು.
4. ರೈತ ಉತ್ಪಾದಕರ ಸಂಸ್ಥೆಗಳ ಮೌಲ್ಯ ಸರಪಳಿಯ ಅಭಿವೃದ್ಧಿಯನ್ನು ಪ್ರೇರೇಪಿಸುವುದು ಹಾಗೂ ಕೃಷಿ ಕ್ಷೇತ್ರವನ್ನು ವ್ಯವಹಾರಿಕ ಉದ್ದಿಮೆಯಾಗಿ ಪ್ರೋತ್ಸಾಹಿಸಲು.
5. ರೈತ ಉತ್ಪಾದಕರ ಸಂಸ್ಥೆಗಳಿಗೆ ಬ್ಯಾಕ್ವರ್ಡ್(ಉತ್ಪಾದನೆಯ ಮುನ್ನ) ಮತ್ತು ಫಾರ್ವರ್ಡ್ (ಉತ್ಪಾದನೆಯ ನಂತರ) ಸರಪಳಿಗಳನ್ನು ಸೃಜಿಸುವುದರ ಮೂಲಕ, ರೈತ ಉತ್ಪಾದಕರ ಸಂಸ್ಥೆಗಳ ಆದಾಯ ದ್ವಿಗುಣಗೊಳಿಸಲು ಸಹಕಾರಿಯಾಗಲು.

6. ಕೃಷಿ/ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ರೇಷ್ಮೆ ಹಾಗೂ ಕೈಮಗ್ಗ & ಜವಳಿ ಉತ್ಪನ್ನಗಳ ಸಂಸ್ಕರಣೆ/ ಮೌಲ್ಯವರ್ಧಿತ ಸಂಸ್ಕರಣೆ ಘಟಕಗಳಿಗೆ ಹೆಚ್ಚಿನ ಒತ್ತು ನೀಡಲು ಸಹಕಾರಿಯಾಗಲು, ರೈತ ಉತ್ಪಾದಕರ ಸಂಸ್ಥೆಗಳು ಪಡೆಯುವ ಸಾಲಕ್ಕೆ ಬಡ್ಡಿ ಸಹಾಯಧನ ಒದಗಿಸಲು.

## III. <u>ಸಹಾಯಧನ ಮತ್ತು ಅನುದಾನ:</u>

ಈ ಕಾರ್ಯಕ್ರಮವು ರಾಜ್ಯ ಸರ್ಕಾರ ಪುರಸ್ಕೃತ ಯೋಜನೆಯಾಗಿದ್ದು, ಹಿಂದುಳಿದ ತಾಲ್ಲೂಕುಗಳಲ್ಲಿ ರಚನೆಯಾಗಿರುವ 100 ರೈತ ಉತ್ಪಾದಕರ ಸಂಸ್ಥೆಗಳು ವ್ಯಾಪಾರ ವ್ಯವಹಾರ ಅಭಿವೃದ್ಧಿಗಾಗಿ, ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ಪಡೆದ ತಲಾ ಗರಿಷ್ಠ 20ಲಕ್ಷ ರೂ.ಗಳವರೆಗೆ ಸಾಲಕ್ಕೆ, ಸರ್ಕಾರದಿಂದ ಶೇ.4ರಷ್ಟು ಬಡ್ಡಿ ಸಹಾಯಧನವನ್ನು ಬ್ಯಾಂಕುಗಳಿಗೆ ಪಾವತಿ ಮಾಡುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಅಭಿವೃದ್ಧಿಗಾಗಿ ನೆರವು ನೀಡಲಾಗುವುದು.

2023-24ನೇ ಸಾಲಿನ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಯೋಜನೆಯ ಲೆಕ್ಕ ಶೀರ್ಷಿಕೆ: 2401-00-195-0-01ರ ಉಪ ಶೀರ್ಷಿಕೆ: 103 ರಡಿ ರೂ.50.00 ಲಕ್ಷಗಳ (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ನಿಗದಿಪಡಿಸಲಾಗಿದೆ.

## IV. <u>ಸಹಾಯಧನಕ್ಕೆ ಅರ್ಹತೆ ಮಾನದಂಡಗಳು:</u>

1. ರಾಜ್ಯದಲ್ಲಿನ ಹಿಂದುಳಿದ ತಾಲ್ಲೂಕುಗಳಲ್ಲಿ ರಚನೆಗೊಂಡು, ಕಂಪನಿ ಕಾಯ್ದೆ 2013 ಅಡಿಯಲ್ಲಿ ನೋಂದಾಯಿಸಿ, ಕನಿಷ್ಠ 600 ರೈತ/ಷೇರುದಾರರನ್ನು ಹೊಂದಿ, Input & Output ವ್ಯವಹಾರದಲ್ಲಿ ಸಕ್ರಿಯವಾಗಿ ವ್ಯವಹರಿಸಿ 2022-23ನೇ ಸಾಲಿನಲ್ಲಿ ವಾರ್ಷಿಕ ಕನಿಷ್ಠ (ಎರಡು ವ್ಯವಹಾರಗಳು ಕೂಡಿದಂತೆ) ಒಟ್ಟು ರೂ.20.00 ಲಕ್ಷಗಳ ವರೆಗೆ ವ್ಯವಹಾರವನ್ನು ಮಾಡುತ್ತಿರುವಂತಹ 100 ರೈತ ಉತ್ಪಾದಕರ ಸಂಸ್ಥೆಗಳು ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ಪ್ರಸಕ್ತ ಸಾಲಿನಲ್ಲಿ ಪಡೆದ ಗರಿಷ್ಠ ರೂ.20.00 ಲಕ್ಷಗಳ ವರೆಗಿನ ಸಾಲಕ್ಕೆ (ಮಂಜೂರಾದ ಸಾಲಕ್ಕೆ) ಶೇ.4 ರಷ್ಟು ಬಡ್ಡಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.

2. ದಿನಾಂಕ:01.04.2023ರಿಂದ ಯೋಜನೆ (Project)ಘಟಕದ ಮಂಜೂರಾತಿ ಪಡೆದು ಸಹಕಾರಿ ಅಥವಾ ವಾಣಿಜ್ಯ ಬ್ಯಾಂಕುಗಳಿಂದ ಪಡೆದಂತಹ ಹಿಂದುಳಿದ ತಾಲ್ಲೂಕಿನ 100 ರೈತ ಉತ್ಪಾದಕರ ಸಂಸ್ಥೆಗಳು ಮಾತ್ರ ರಾಜ್ಯ ಸರ್ಕಾರದಿಂದ ಶೇ.4 ರಷ್ಟು ಬಡ್ಡಿ ಸಹಾಯಧನ ಸವಲತ್ತು ಪಡೆಯಲು ಅರ್ಹತೆಯನ್ನು ಪಡೆಯುತ್ತಾರೆ.
3. ಪ್ರತಿ ತ್ರೈಮಾಸಿಕ/ಅರ್ಧವಾರ್ಷಿಕ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದ ರೈತ ಉತ್ಪಾದಕರ ಸಂಸ್ಥೆಗಳು ಮಾತ್ರ ರಾಜ್ಯ ಸರ್ಕಾರದಿಂದ ನೀಡಲಾಗುವ ಶೇ.4ರ ಬಡ್ಡಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.
4. ನಿಗಧಿತ ತ್ರೈಮಾಸಿಕ/ಅರ್ಧವಾರ್ಷಿಕ ಅವಧಿಯೊಳಗೆ ರೈತ ಉತ್ಪಾದಕರ ಸಂಸ್ಥೆಗಳು ಬಡ್ಡಿ ಪಾವತಿಸದೆ ಉಳಿಸಿಕೊಂಡು ದಂಡದ ಮೊತ್ತಕ್ಕೆ (Penalty Amount) ಸಂಬಂದಿಸಿದಂತೆ, ಬಡ್ಡಿ ಸಹಾಯಧನ ಪಡೆಯಲು ಅವಕಾಶವಿರುವುದಿಲ್ಲ.
5. ಸದರಿ ಸಹಾಯಧನದ ಸವಲತ್ತು ಪಡೆಯಲು ಹಿಂದುಳಿದ ತಾಲ್ಲೂಕಿನ ರೈತ ಉತ್ಪಾದಕರ ಸಂಸ್ಥೆಗಳು ನಿಗಧಿತ ನಮೂನೆಯಲ್ಲಿ (ಅನುಬಂಧ-1ರಂತೆ) ಅರ್ಜಿಯನ್ನು ಸಲ್ಲಿಸುವುದು.
6. 2023-24ನೇ ಸಾಲಿನಲ್ಲಿ ಸಾಲ ಪಡೆದು ಅರ್ಜಿಗಳನ್ನು ಸಲ್ಲಿಸಿದ ರೈತ ಉತ್ಪಾದಕರ ಸಂಸ್ಥೆಗಳು ಪ್ರಸಕ್ತ ಸಾಲಿಗೆ ಮಾತ್ರ ಶೇ.4ರ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.
7. ಪ್ರತಿ ಸಾಲಿಗೆ ಅನುಧಾನ ಲಭ್ಯತೆ ಆಧಾರದ ಮೇಲೆ ಆಯಾ ಸಾಲಿಗೆ ಸಂಬಂದಿಸಿದಂತೆ ಹೊಸ ಅರ್ಜಿಗಳನ್ನು ಆಹ್ವಾನಿಸಲಾಗುವುದು.

V. <u>**ಅನುಷ್ಠಾನ ಕ್ರಮಗಳು**</u>:

<u>**ಪ್ರಚಾರ**</u>:

1. ಹಿಂದುಳಿದ ತಾಲ್ಲೂಕುಗಳ ಸಹಾಯಕ ಕೃಷಿ ನಿರ್ದೇಶಕರು, ಯೋಜನೆಯ ಕುರಿತು ಹೆಚ್ಚಿನ ಪ್ರಚಾರ ಕೈಗೊಂಡು ರೈತ ಉತ್ಪಾದಕರ ಸಂಸ್ಥೆಗಳಿಂದ ನಿಗದಿತ ನಮೂನೆಗಳಲ್ಲಿ ಅರ್ಜಿಗಳನ್ನು ಪಡೆಯಲು ಕ್ರಮವಹಿಸುವುದು.

2. ಯೋಜನೆ ಕುರಿತು ಜನಪ್ರತಿನಿಧಿಗಳ ಗಮನಕ್ಕೆ ತರುವುದು ಹಾಗೂ ಸ್ಥಳೀಯ/ಪ್ರಮುಖ ಪತ್ರಿಕೆಗಳ ಮುಖಾಂತರ ಪ್ರಕಟಣೆ ಹೊರಡಿಸುವುದು.
3. ಸಾರ್ವಜನಿಕ ಕಛೇರಿಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಕಛೇರಿ ಹಾಗೂ ಇತರೆ ಸಂಬಂಧಿತ ಇಲಾಖೆಗಳ ಆವರಣದಲ್ಲಿ ಪೋಸ್ಟರ್ ಇತ್ಯಾದಿಗಳ ಮೂಲಕ ಹೆಚ್ಚಿನ ಪ್ರಚಾರ ನೀಡುವುದು.
4. ತಾಲ್ಲೂಕಿಗೆ ನಿಗದಿಪಡಿಸಿರುವ ಆರ್ಥಿಕ ಮತ್ತು ಭೌತಿಕ ಗುರಿಯಂತೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
5. ತಾಲ್ಲೂಕಿನಲ್ಲಿ ಪ್ರಚಾರ ಕೈಗೊಳ್ಳಲು ಪ್ರತಿ ತಾಲ್ಲೂಕಿಗೆ ರೂ.2000ಗಳನ್ನು ಹಾಗೂ ರಾಜ್ಯಮಟ್ಟದ ಪ್ರಚಾರಕ್ಕೆ ರೂ.5.00 ಲಕ್ಷಗಳನ್ನು ನಿಗಧಿಪಡಿಸಿದೆ.
6. ಅನುದಾನದ ಲಭ್ಯತೆ ಆಧಾರದ ಮೇರೆಗೆ ಪ್ರಚಾರಕ್ಕೆ ನಿಗಧಿಪಡಿಸಿದ ಅನುದಾನವನ್ನು ಪರಿಷ್ಕರಿಸಲು, ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆರವರು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಅಧಿಕಾರ ಹೊಂದಿರುತ್ತಾರೆ.

## VI. <u>ಅರ್ಜಿ ಸಲ್ಲಿಸುವ ವಿಧಾನ:</u>

1. ನಿಗಧಿತ ಅರ್ಜಿ ನಮೂನೆ ಅನುಬಂಧ-1ರಲ್ಲಿ ರೈತ ಉತ್ಪಾದಕರ ಸಂಸ್ಥೆಗಳು ಮಾಹಿತಿಯನ್ನು ಭರ್ತಿಮಾಡಿ ಅವಶ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಜಿಲ್ಲೆಗಳು ನಿಗಧಿಪಡಿಸಿದ ದಿನಾಂಕದೊಳಗೆ ಸಂಬಂಧಿಸಿದ ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸಲ್ಲಿಸುವುದು.

2. ಅರ್ಜಿ ಸಲ್ಲಿಕೆ ಸಮಯದಲ್ಲಿ ಜೇಷ್ಠತಾ ಕ್ರಮವನ್ನು ನಿರ್ವಹಿಸುವುದು. ಒಂದು ವೇಳೆ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾದಲ್ಲಿ, ಜೇಷ್ಠತಾ ಪಟ್ಟಿಯನ್ವಯ ಅರ್ಜಿಗಳನ್ನು ಪರಿಗಣಿಸುವುದು, ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆಯ ಮಾನದಂಡ ಅನುಸರಿಸುವುದು. ಈ ಕುರಿತು ರೈತ ಉತ್ಪಾದಕರ ಸಂಸ್ಥೆಗಳಿಗೆ ಮಾಹಿತಿ ಒದಗಿಸಲು ಕ್ರಮಕೈಗೊಳ್ಳುವುದು.

3. ದಾಖಲಾತಿಗಳ ಚೆಕ್ ಲಿಸ್ಟ್:

a) ಅನುಬಂಧ-1 ರಲ್ಲಿ ಭರ್ತಿ ಮಾಡಿದ ಅರ್ಜಿ ನಮೂನೆ.
b) ರೈತ ಉತ್ಪಾದಕರ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
c) ವ್ಯಾಪಾರ ವ್ಯವಹಾರ ಅಭಿವೃದ್ಧಿಗಾಗಿ ಬ್ಯಾಂಕ್ ಮೂಲಕ ಪಡೆದ ಸಾಲದ ಚಟುವಟಿಕೆಗಳ ವಿಸ್ತೃತ ಯೋಜನಾ ವರದಿಯ ಪ್ರತಿ.
d) ಬ್ಯಾಂಕ್ ನಿಂದ ನೀಡಲಾಗಿರುವ ಸಾಲ ಮಂಜೂರಾತಿ ಪ್ರಮಾಣ ಪತ್ರದ ಧೃಡೀಕೃತ ಪ್ರತಿ.
e) ರೈತ ಉತ್ಪಾದಕರ ಸಂಸ್ಥೆಯ GST, PAN , TAN ಸಂಖ್ಯೆಗಳ ಪ್ರತಿಗಳು.
f) ಸಂಬಂಧಿಸಿದ Input & Output ವ್ಯಾಪಾರ ವ್ಯವಹಾರದ ದಾಖಲಾತಿಗಳ ಸ್ವಯಂ ದೃಡಿಕೃತ ಪ್ರತಿ.
g) ಸಾಲ ಮಂಜೂರಾತಿಗಾಗಿ ಬ್ಯಾಂಕಿಗೆ ಸಲ್ಲಿಸಿದ ಯೋಜನಾ ವಿಸ್ತೃತ ವರದಿಯ ದೃಡಿಕೃತ ಪ್ರತಿ.
h) ಮೇಲೆ ನಮೂದಿಸಿದ ಕ್ರಸಂ (a) ರಿಂದ (g) ವರೆಗಿನ ದಾಖಲಾತಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅಪೂರ್ಣ ಅರ್ಜಿ ನಮೂನೆ ಮತ್ತು ದಾಖಲಾತಿಗಳನ್ನು ಸಲ್ಲಿಸಿದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

## VII. <u>ಅರ್ಜಿಯ ಪರಿಶೀಲನೆ ಮತ್ತು ಸಹಾಯಧನ ಮಂಜೂರಾತಿ:</u>

1. ಜಂಟಿ ಕೃಷಿ ನಿರ್ದೇಶಕರ ರವರ ಕಛೇರಿಯಲ್ಲಿ ಪಡೆಯಲಾದ ಅರ್ಜಿಗಳನ್ನು ಸಂಬಂಧಿಸಿದ ಅಧೀನ ಹಿಂದುಳಿದ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಿಗೆ ಅರ್ಜಿಗಳ ಪರಿಶೀಲನೆ ಮತ್ತು ಶಿಫಾರಸ್ಸಿಗಾಗಿ ಕಳುಹಿಸುವುದು.
2. ಅಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಅರ್ಜಿಗಳನ್ನು ಮಾರ್ಗಸೂಚಿಯಂತೆ ಸ್ವೀಕೃತವಾದ ಏಳು ದಿನಗಳ ಒಳಗೆ ಪರಿಶೀಲಿಸಿ, ದೃಢೀಕರಿಸಿದ ಅನುಬಂಧ-2ರ ಪರಿಶೀಲನಾ ಪ್ರಮಾಣ ಪತ್ರ ಮತ್ತು ಪೂರಕ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಉಪ ಕೃಷಿ ನಿರ್ದೇಶಕರಿಗೆ ಅಗತ್ಯ ಕ್ರಮಕ್ಕಾಗಿ ಸಲ್ಲಿಸುವುದು.

3. ಉಪ ಕೃಷಿ ನಿರ್ದೇಶಕರು ಸ್ವೀಕೃತವಾದ ಅರ್ಜಿಗಳನ್ನು ಎರಡು ದಿನದೊಳಗೆ ಮರು ಪರಿಶೀಲಿಸಿ, ತಮ್ಮ ಶಿಫಾರಸ್ಸಿನೊಂದಿಗೆ ಅನುಬಂಧ-3ರಲ್ಲಿ ದೃಢೀಕರಿಸಿ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
4. ಜಂಟಿ ಕೃಷಿ ನಿರ್ದೇಶಕರು, ಅರ್ಜಿ ಸಲ್ಲಿಸಿದ ರೈತ ಉತ್ಪಾದಕರ ಸಂಸ್ಥೆಯು ಪಡೆದ ಸಾಲದ ಕುರಿತು ಅನುಬಂಧ-4 ರಂತೆ ಸಂಬಂಧಿಸಿದ ಬ್ಯಾಂಕಿನ ಮುಖ್ಯಸ್ಥರಿಂದ ದೃಢಿಕರಣ ಪಡೆಯುವುದು.
5. ಜಂಟಿ ಕೃಷಿ ನಿರ್ದೇಶಕರು ಏಳು ದಿನದೊಳಗೆ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ FPO ಸಮಿತಿಯಲ್ಲಿ ಅನುಮೋದನೆ ಪಡೆಯುವುದು.
6. ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆ ನಂತರ ಸಮಿತಿಯ ಪರವಾಗಿ ಅನುಮೋದನೆ ಪ್ರಮಾಣ ಪತ್ರವನ್ನು ಅನುಬಂಧ-5ರಲ್ಲಿ ಸಂಬಂಧಿಸಿದ ರೈತ ಉತ್ಪಾದಕರ ಸಂಸ್ಥೆಗಳಿಗೆ ನೀಡುವುದು. ತದ ನಂತರ ಎರಡು ದಿನದೊಳಗೆ ನಿಯಮಾನುಸಾರ ಬಡ್ಡಿ ಸಹಾಯಧನವನ್ನು ಸಂಬಂಧಿಸಿದ ರೈತ ಉತ್ಪಾದಕರ ಸಂಸ್ಥೆಗಳ ಸಾಲದ ಖಾತೆಗೆ ಪಾವತಿಸಲು ಕ್ರಮ ವಹಿಸುವುದು.

## VIII. ಇತರೆ:

1. ಅನುದಾನದ ಲಭ್ಯತೆ ಆಧಾರದ ಮೇರೆಗೆ, ನಿಗಧಿಪಡಿಸಿದ ಗುರಿಯಂತೆ ಯೋಜನೆಯನ್ನು ಅನುಷ್ಠಾನಗೊಳಿಸುವುದು.
2. ಪ್ರಗತಿ ವರದಿಗಳನ್ನು ಆಯಾ ಮಾಹೆಯ ಅಂತ್ಯದೊಳಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
3. ಯಾವುದೇ ಬದಲಾವಣೆಗಳು ಅವಶ್ಯವಿದ್ದಲ್ಲಿ, ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆದ ನಂತರವೇ ಅನುಷ್ಠಾನಗೊಳಿಸುವುದು.

## ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಜಿಲ್ಲಾಮಟ್ಟದ ರೈತ ಉತ್ಪಾದಕರ ಉತ್ತೇಜನ ಮತ್ತು ಮೇಲ್ವಿಚಾರಣೆ ಸಮಿತಿ ವಿವರ

| | | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು | ಉಪಾಧ್ಯಕ್ಷರು |
| 3 | ಜಂಟಿ ಕೃಷಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ & ನೋಡಲ್ ಅಧಿಕಾರಿ |
| 4 | ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 5 | ಉಪ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| 6 | ಉಪ ನಿರ್ದೇಶಕರು, ಕೃಷಿ ಮಾರುಕಟ್ಟೆ ಇಲಾಖೆ | ಸದಸ್ಯರು |
| 7 | ಉಪ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ | ಸದಸ್ಯರು |
| 8 | ಉಪ ಸಂರಕ್ಷಣಾಧಿಕಾರಿ, (ವಲಯ ಮತ್ತು ಸಾಮಾಜಿಕ), ಅರಣ್ಯ ಇಲಾಖೆ | ಸದಸ್ಯರು |
| 9 | ಉಪ ನಿಬಂಧಕರು, ಸಹಕಾರ ಇಲಾಖೆ | ಸದಸ್ಯರು |
| 10 | ಹಿರಿಯ ಸಹಾಯಕ ನಿರ್ದೇಶಕರು/ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ. | ಸದಸ್ಯರು |
| 11 | ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು | ಸದಸ್ಯರು |
| 12 | ಡಿ.ಡಿ.ಎಂ/ಎಲ್. ಡಿ.ಎಂ. ನಬಾರ್ಡ್ ಸಂಸ್ಥೆ | ಸದಸ್ಯರು |
| 13 | ಲೀಡ್ ಬ್ಯಾಂಕ್ ವ್ಯವಸ್ಥಾಪಕರು | ಸದಸ್ಯರು |

# ಅನುಬಂಧ-1

## ಅರ್ಜಿ ನಮೂನೆ:

## ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ವ್ಯಾಪಾರ ಅಭಿವೃದ್ಧಿಗಾಗಿ ಪಡೆದ ಸಾಲದ ಮೊತ್ತಕ್ಕೆ ಸರ್ಕಾರದಿಂದ ಶೇ.4ರ ಬಡ್ಡಿ ಸಹಾಯಧನ ಪಡೆಯಲು

ಇವರಿಗೆ,
ಜಂಟಿ ಕೃಷಿ ನಿರ್ದೇಶಕರು
______________ಜಿಲ್ಲೆ.

ಮಾನ್ಯರೆ,

M/s____________________________ರೈತ ಉತ್ಪಾದಕರ ಸಂಸ್ಥೆಯು ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿರುವ ತಾಲ್ಲೂಕಿನಲ್ಲಿ ರಚನೆಗೊಂಡಿದ್ದು, ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ _______________________ ಆದ ನಾನು, ಸಂಸ್ಥೆಯ ಪರವಾಗಿ ರೈತ ಉತ್ಪಾದಕರ ಸಂಸ್ಥೆಗಳಿಗೆ ವ್ಯಾಪರ ಅಭಿವೃದ್ಧಿಗಾಗಿ ರೂ.20.00 ಲಕ್ಷ ವರೆಗೆ ಸಹಕಾರಿ/ವಾಣಿಜ್ಯ ಬ್ಯಾಂಕಿನ ಮೂಲಕ ಪಡೆದ ಸಾಲಕ್ಕೆ ಸರ್ಕಾರದಿಂದ ನೀಡುವ ಶೇ.4ರ ಬಡ್ಡಿ ಸಹಾಯಧನ ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ, ಬಡ್ಡಿ ಸಹಾಯಧನ ಒದಗಿಸಲು ಕೋರುತ್ತೇನೆ.

| ಕ್ರ ಸಂ | ವಿವರ | ವಿವರಣೆ |
|---|---|---|
| 1. | ರೈತ ಉತ್ಪಾದಕರ ಸಂಸ್ಥೆಯ ಹೆಸರು | |
| 2 | ರೈತ ಉತ್ಪಾದಕರ ಸಂಸ್ಥೆಯ ಪೂರ್ಣ ಅಂಚೆ ವಿಳಾಸ | |
| 3 | ರೈತ ಉತ್ಪಾದಕರ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದಂತೆ ನೋಂದಣಿ ಸಂಖ್ಯೆ (ಪ್ರತಿ ಲಗತ್ತಿಸುವುದು) | |
| 4 | ರೈತ ಉತ್ಪಾದಕರ ಸಂಸ್ಥೆ ರಚನೆಗೊಂಡ ವರ್ಷ | |
| 5 | ಅನುಷ್ಠಾನ ಇಲಾಖೆಯ ಹೆಸರು | |
| 6 | ಯಾವ ಯೋಜನೆಯಡಿ ರಚನೆಗೊಂಡಿದೆ | |

| | | |
|---|---|---|
| 7 | ನೋಂದಾಯಿತ ಷೇರುದಾರರ ಸಂಖ್ಯೆ (ಇಲ್ಲಿಯವರೆಗೆ) | |
| 8 | ರೈತ ಉತ್ಪಾದಕರ ಸಂಸ್ಥೆಯ (ಪ್ರತಿ ಲಗತ್ತಿಸುವುದು)<br>ಅ) GST ಸಂಖ್ಯೆ | |
| | ಆ) PAN ಸಂಖ್ಯೆ | |
| | ಇ) TAN ಸಂಖ್ಯೆ | |
| 8 | Input Business ಪ್ರಾರಂಭಿಸಲಾಗಿದೆಯೇ? | ಹೌದು / ಇಲ್ಲ |
| 9 | ಹೌದು ಎಂದರೆ, ಕೈಗೊಂಡ Input Business ವಿವರಗಳು (ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸುವುದು) | |
| 10 | 2022-23ನೇ ಸಾಲಿನ Input Business ಒಟ್ಟು ವಹಿವಾಟಿನ ಮೊತ್ತ (ರೂ.ಲಕ್ಷಗಳಲ್ಲಿ) | |
| 11 | 2022-23ನೇ ಸಾಲಿನ Input Business ವಹಿವಾಟಿನ ಲಾಭದ ಮೊತ್ತ (ರೂ.ಲಕ್ಷಗಳಲ್ಲಿ) | |
| 12 | Output Business ಪ್ರಾರಂಭಿಸಲಾಗಿದೆಯೇ? | ಹೌದು / ಇಲ್ಲ |
| 13 | ಹೌದು ಎಂದರೆ, ಕೈಗೊಂಡ Output Business ವಿವರಗಳು (ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸುವುದು) | |
| 14 | 2022-23ನೇ ಸಾಲಿನ Output Business ಒಟ್ಟು ವಹಿವಾಟು ಮೊತ್ತ (ರೂ.ಲಕ್ಷಗಳಲ್ಲಿ) | |
| 15 | 2022-23ನೇ ಸಾಲಿನ Output Business ವಹಿವಾಟಿನ ಲಾಭದ ಮೊತ್ತ (ರೂ.ಲಕ್ಷಗಳಲ್ಲಿ) | |
| 16 | ರೈತ ಉತ್ಪಾದಕರ ಸಂಸ್ಥೆಯ ವ್ಯಾಪಾರದ ಅಭಿವೃದ್ಧಿಗೆ ಪಡೆದ ಸಾಲದ ಮೊತ್ತ (ರೂ.ಲಕ್ಷಗಳಲ್ಲಿ) (ದಿನಾಂಕ:01.04.2023ರಿಂದ ಪಡೆದಿರುವ ಸಾಲ) | |
| 17 | Collateral ಭದ್ರತಾ ಸಾಲದ ವಿವರಗಳು | |

| | | | |
|---|---|---|---|
| 18 | ಸಾಲ ಪಡೆದ ಬ್ಯಾಂಕಿನ ಹೆಸರು & ಶಾಖೆ | | |
| | FPOದ ಸಾಲದ ಖಾತೆ ಸಂಖ್ಯೆ | | |
| | ಶಾಖೆಯ IFSC Code ಸಂಖ್ಯೆ | | |
| | ಬ್ಯಾಂಕಿನ ಪೂರ್ಣ ಅಂಚೆ ವಿಳಾಸ | | |
| 19 | ಬ್ಯಾಂಕಿನಿಂದ ಸಾಲ ಪಡೆದ ವರ್ಷ & ದಿನಾಂಕ | ವರ್ಷ: | ದಿನಾಂಕ: |
| 20 | ರೈತ ಉತ್ಪಾದಕರ ಸಂಸ್ಥೆ ಪಡೆದ ಬ್ಯಾಂಕಿನ ಸಾಲ ಮಂಜೂರಾತಿ ಪ್ರಮಾಣ ಪತ್ರ. (ಜೊತೆ ಯೋಜನಾ ವಿಸ್ತೃತ ವರದಿಯ ಪ್ರತಿಯನ್ನು ಲಗತ್ತಿಸುವುದು) | | |

## ಪ್ರಮಾಣೀಕೃತ ಘೋಷಣೆ

ಈ ಮೇಲೆ ಒದಗಿಸಲಾದ ಮಾಹಿತಿಗಳು/ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವಾಗಿರುತ್ತದೆ ಎಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

**ಸ್ಥಳ:**

**ದಿನಾಂಕ:**

**ತಮ್ಮ ವಿಧೇಯ**

**ಅಧ್ಯಕ್ಷರ ಸಹಿ**

**ಹೆಸರು:**____________________

________________**ರೈತ ಉತ್ಪಾದಕರ ಸಂಸ್ಥೆ**

**ಕಾರ್ಯನಿರ್ವಹಣಾಧಿಕಾರಿಯ ಸಹಿ**

**ಹೆಸರು:**____________________

________________**ರೈತ ಉತ್ಪಾದಕರ ಸಂಸ್ಥೆ**

**ರೈತ ಉತ್ಪಾದಕರ ಸಂಸ್ಥೆಯ ಇಬ್ಬರು ನಿರ್ದೇಶಕರುಗಳ ಸಾಕ್ಷಿ:**

**1.**

**ಸಾಕ್ಷಿದಾರರ ಸಹಿ**

**ಸಾಕ್ಷಿದಾರರ ಹೆಸರು:**

**ಪೂರ್ಣ ವಿಳಾಸ:**

**2.**

**ಸಾಕ್ಷಿದಾರರ ಸಹಿ**

**ಸಾಕ್ಷಿದಾರರ ಹೆಸರು:**

**ಪೂರ್ಣ ವಿಳಾಸ:**

## ಅನುಬಂಧ-2

# ಪರಿಶೀಲನಾ ಪ್ರಮಾಣ ಪತ್ರ

M/s________________________________ ರೈತ ಉತ್ಪಾದಕರ ಸಂಸ್ಥೆಯು__________ಜಿಲ್ಲೆಯ__________ತಾಲ್ಲೂಕಿನ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿದ್ದು ________________ಇಲಾಖೆ ವತಿಯಿಂದ ________________ ಯೋಜನೆಯಡಿ _________ವರ್ಷದಲ್ಲಿ ರಚನೆಗೊಂಡಿರುತ್ತದೆ. ಸದರಿ ಸಂಸ್ಥೆಯು __________________ ಸಹಕಾರಿ/ವಾಣಿಜ್ಯ ಬ್ಯಾಂಕಿನಲ್ಲಿ ರೂ.__________=00 (ಅಕ್ಷರಗಳಲ್ಲಿ ______ ______________________________ ರೂಪಾಯಿಗಳು) ಮೊತ್ತದ ಸಾಲವನ್ನು ರೈತ ಉತ್ಪಾದಕರ ಸಂಸ್ಥೆಯ ________________________________ ವ್ಯವಹಾರದ ಅಭಿವೃದ್ಧಿಗಾಗಿ _________ವರ್ಷದಲ್ಲಿ ಸಾಲವಾಗಿ ಪಡೆದಿರುತ್ತಾರೆ.

ಸದರಿ ಸಂಸ್ಥೆಯ ವ್ಯಾಪಾರ ವಹಿವಾಟುಗಳನ್ನು ಮತ್ತು ಅನುಬಂಧ-1 ಅರ್ಜಿಯಲ್ಲಿ ಸಲ್ಲಿಸಿರುವ ವರದಿಗಳನ್ನು ಪರಿಶೀಲಿಸಲಾಗಿದ್ದು, ಸದರಿ ರೈತ ಉತ್ಪಾದಕರ ಸಂಸ್ಥೆಯು ಹಿಂದುಳಿದ ತಾಲ್ಲೂಕುಗಳಲ್ಲಿ ರಚನೆಗೊಂಡಿರುವ ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಸರ್ಕಾರದಿಂದ ನೀಡುವ ಶೇ.4 ರಷ್ಟು ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುವುದರಿಂದ ಈ ಮೂಲಕ ಪ್ರಮಾಣಿಕರಿಸಿ ಉಪ ಕೃಷಿ ನಿರ್ದೇಶಕರು, ________-_____ವಿಭಾಗ____________ಜಿಲ್ಲೆ ರವರಿಗೆ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ಸ್ಥಳ:

ದಿನಾಂಕ:

ಸಹಾಯಕ ಕೃಷಿ ನಿರ್ದೇಶಕರು

__________ ತಾಲ್ಲೂಕು

__________ ಜಿಲ್ಲೆ.

# ಅನುಬಂಧ-3

## 2023-24ನೇ ಸಾಲಿನ ಮಾಸಿಕ/ತ್ರೈಮಾಸಿಕ/ಅರ್ಧವಾರ್ಷಿಕ ಕಂತು ಪಾವತಿಸಲು ಶಿಫಾರಸ್ಸು ಪ್ರಮಾಣ ಪತ್ರ

__________ ಜಿಲ್ಲೆ __________ ತಾಲ್ಲೂಕು ಹಿಂದುಳಿದ ತಾಲ್ಲೂಕಿನ ಪಟ್ಟಿಯಲ್ಲಿದ್ದು ____________________ (ಇಲಾಖೆ/ಸಂಸ್ಥೆ/ಸ್ವಯಂ ರೈತರಿಂದ) ರಿಂದ ರಚನೆಗೊಂಡಿರುವ M/s____________________ ರೈತ ಉತ್ಪಾದಕರ ಸಂಸ್ಥೆಯು ವ್ಯಾಪಾರದ ಅಭಿವೃದ್ಧಿಗಾಗಿ ರೂ_____=00 (ಅಕ್ಷರದಲ್ಲಿ________________) ಮೊತ್ತದ ಸಾಲವನ್ನು ________________________ ಸಹಕಾರಿ/ವಾಣಿಜ್ಯ ಬ್ಯಾಂಕಿನಲ್ಲಿ ________ ವರ್ಷದಲ್ಲಿ ________ದಿನಾಂಕದಂದು ಮಂಜುರಾತಿಯನ್ನು ಪಡೆದಿರುತ್ತಾರೆ. ಯೋಜನಾ ವರದಿಯಲ್ಲಿ ನಮೂದಿಸಿದ ಮಾಹಿತಿಯನ್ನಾದರಿಸಿ ದಿನಾಂಕ: ________ರಂದು ಪರಿಶೀಲಿಸಲಾಗಿದ್ದು, ಸದರಿ ರೈತ ಉತ್ಪಾದಕರ ಸಂಸ್ಥೆಯು ಬ್ಯಾಂಕಿನಿಂದ ಮೇಲೆ ನಮೂದಿಸಿದ ಸಾಲಕ್ಕೆ ಕಾಲಮಿತಿಯೊಳಗೆ ಪಾವತಿಸಬೇಕಾದ _________ಮಾಸಿಕ/ತ್ರೈಮಾಸಿಕ/ಅರ್ಧವಾರ್ಷಿಕ ಕಂತಿನ ಬಡ್ಡಿ ಮೊತ್ತ ರೂ. __________=೦೦ಗಳನ್ನು ಪಾವತಿಸಿರುವುದರಿಂದ, ಶೇ.4ರಂತೆ ರೂ._____=00 (ಅಕ್ಷರದಲ್ಲಿ____________________________) ಗಳ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುತ್ತಾರೆ ಎಂದು ದೃಡಿಕರಿಸುತ್ತೇನೆ.

ಸದರಿ ರೈತ ಉತ್ಪಾದಕರ ಸಂಸ್ಥೆಗೆ ಸರ್ಕಾರದಿಂದ ಹಿಂದುಳಿದ ತಾಲ್ಲೂಕುಗಳ ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು, ಸಹಕಾರಿ/ವಾಣಿಜ್ಯ ಬ್ಯಾಂಕುಗಳು ನೀಡಿದ ರೂ. _________=೦೦ ಗಳಿಗೆ ಅನುಗುಣವಾಗಿ ಸರ್ಕಾರದಿಂದ ಶೇ.4ರಷ್ಟು ಬಡ್ಡಿ ಸಹಾಯಧನ ರೂ.__________=00ಗಳನ್ನು (ಅಕ್ಷರದಲ್ಲಿ____________________________) ನೀಡಲು ಶಿಫಾರಸ್ಸಿನೊಂದಿಗೆ ಜಂಟಿ ಕೃಷಿ ನಿರ್ದೇಶಕರು, ____________ ಜಿಲ್ಲೆಯ ರವರಿಗೆ ಸಲ್ಲಿಸಿದೆ.

ಸ್ಥಳ: ಉಪ ಕೃಷಿ ನಿರ್ದೇಶಕರು

ದಿನಾಂಕ: _________ ವಿಭಾಗ

_________ ಜಿಲ್ಲೆ

# Annexure (ಅನುಬಂಧ) -4

**To,**

The Joint Director of Agriculture,
__________________District.

**Subject:** Interest subsidy claim in respect to ____________________________ FPCL/FPO for __________________ _______ business activities.

*****

With reference to the department of Agriculture's letter No:________________________________ dated: ____________, it is to inform that the _________________________________FPO/FPCL has availed a loan amount of Rs.______________=00 from our bank in the ________________year. Till now it has paid a loan interest of Rs.______________=00 at the rate of _________% interest towards monthly/quarterly/half yearly interest for the ________________ period.

**It is certified that:**

1. The Loan in the project is not sanctioned for one or few components but for whole of the project as appraised.
2. Activity and component considered in the project for loan are new/expansion.
3. Loan has not been given as advance or as re-imbursement of expenditure already incurred by the FPO/FPCL.
4. No subsidy interest from other agencies of Govt. of India/GoK has been availed/is proposed to be availed for this project or components thereof.
5. The subsidy interest so granted by the Department of Agriculture to the bank shall be credited to above mentioned FPCL account only.

(Signature of the Bank Officer with Seal)

Name: ____________________________

Name of the Bank:________________________

IFSC Code:______________________________

Bank Address :______________________________________________

Phone/Mobile : _________________________.

# ಅನುಬಂಧ-5

## ಅನುಮೋದನೆ ಪ್ರಮಾಣ ಪತ್ರ

M/s_________________________ FPCL/FPO ಹಿಂದುಳಿದ ತಾಲ್ಲೂಕಿನಲ್ಲಿ ರಚನೆಗೊಂಡು _____________________ ಸಹಕಾರಿ ಅಥವಾ ವಾಣಿಜ್ಯ ಬ್ಯಾಂಕಿನಿಂದ ರೂ.____________=00 ಮೊತ್ತವನ್ನು ಯೋಜನಾ ವರದಿಯಲ್ಲಿ ನಮೂದಿಸಿದಂತೆ ವ್ಯಾಪಾರ ವಹಿವಾಟು ಅಭಿವೃದ್ಧಿಗೆ ಪಡೆದ ಮೊತ್ತಕ್ಕೆ ಕಾಲಮಿತಿಯೊಳಗೆ ಪಾವತಿಸಬೇಕಾದ _________ ತ್ರೈಮಾಸಿಕ/ ಅರ್ಧವಾರ್ಷಿಕದ ಕಂತಿನ ಬಡ್ಡಿ ಮೊತ್ತ ರೂ. ___________=೦೦ಗಳನ್ನು ಪಾವತಿಸಿರುವುದನ್ನು ತಾಲ್ಲೂಕು ಅಧಿಕಾರಿಗಳ ಸ್ಥಳ ಪರಿಶೀಲನಾ ವರದಿಯಂತೆ ಧೃಡೀಕರಿಸಿರುತ್ತದೆ.

ಸದರಿ ವಿವರಗಳನ್ನು ಜಿಲ್ಲಾಮಟ್ಟದ FPOಗಳ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವುದರಿಂದ, ಸದರಿ ರೈತ ಉತ್ಪಾದಕರ ಸಂಸ್ಥೆಗೆ ಸರ್ಕಾರದಿಂದ ಹಿಂದುಳಿದ ತಾಲ್ಲೂಕುಗಳ ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು, ಸಹಕಾರಿ ಅಥವಾ ವಾಣಿಜ್ಯ ಬ್ಯಾಂಕ್ ನೀಡಿದ ರೂ. __________=೦೦ ಗಳಿಗೆ ಅನುಗುಣವಾಗಿ ಸರ್ಕಾರದಿಂದ ಶೇ.4ರಷ್ಟು ಬಡ್ಡಿ ಸಹಾಯಧನ ರೂ.__________=00ಗಳನ್ನು (ಅಕ್ಷರದಲ್ಲಿ_______________________________) ಪಾವತಿಸಲು ಸಮಿತಿಯ ಪರವಾಗಿ ಅನುಮೋದಿಸಿದೆ.

ಸ್ಥಳ: ಜಂಟಿ ಕೃಷಿ ನಿರ್ದೇಶಕರು

ದಿನಾಂಕ: __________ ಜಿಲ್ಲೆ